**ಅಸಲು ದಾವೆ ಸಂಖ್ಯೆ -102/2023**
**ಪಿ.ಡಬ್ಲ್ಯೂ- 1**

<u>**ದಿನಾಂಕ 29-07-2025 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲು : ಶ್ರೀ.ಎಮ್.ಜಿ.ಕೆ ವಕೀಲರಿಂದ ಪ್ರತಿವಾದಿ ಪರವಾಗಿ**</u>

1. ವಾದಿಯ ಪರಿಚಯ ನನಗೆ ಕಳೆದ 30 ರಿಂದ 35 ವರ್ಷಗಳಿಂದ ಇದೆ. ವಾದಿ ನಿಮ್ಮ ಸಂಬಂಧಿಕರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿ ನಿಮ್ಮ ಸಹಪಾಠಿ ಅಲ್ಲ ಎಂದರೆ ಸರಿ. ವಾದಿಗೆ ಸ್ವತಃ ಬಂದು ಸಾಕ್ಷಿ ನುಡಿಯಲು ಏನಾದರೂ ತೊಂದರೆ ಇದೆಯಾ ಎಂದರೆ ತೊಂದರೆ ಇದೆ ಎಂದು ಹೇಳುತ್ತಾರೆ. ವಾದಿ ದೈಹಿಕವಾಗಿ ಸದೃಢರಾ ಎಂದರೆ ಹೌದು ಎಂದು ಸಾಕ್ಷಿ ಹೇಳುತ್ತಾರೆ. ಬನಹಟ್ಟಿ ನ್ಯಾಯಾಲಯದಲ್ಲಿ ವಾದಿಯ ವಿರುದ್ದ ಮಹಾದೇವ ಯಕ್ಸಂಬಿ ಎನ್ನುವವರು ಖಾಸಗಿ ಪಿರ್ಯಾದಿ ಸಂಖ್ಯೆ 91/2024 ಎಂದು ಪ್ರಕರಣ ಸಲ್ಲಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ಚೆಕ ಬೌನ್ಸ ಪ್ರಕರಣ ಇದ್ದು, ಅದರಲ್ಲಿ ವಾದಿ ಪ್ರತಿ ದಿನಾಂಕದಂದು ಹಾಜರ ಆಗುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖಾಸಗಿ ಪಿರ್ಯಾದಿ ಸಂಖ್ಯೆ 32/2025 ಎಂದು ಧರ್ಮಶಾಸ್ತ್ರ ಜೂವೆಲೆರಿ ವರ್ಕ್ಸ ಎನ್ನುವ ಪ್ರೊಪರ್ಯೆಟರಿ ಇವರು ವಾದಿಯ ವಿರುದ್ದ ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದು, ಅದರಲ್ಲಿ ವಾದಿ ಪ್ರತಿ ದಿನಾಂಕದಂದು ಹಾಜರಾಗುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿ ಈ ದಾವೆಯಲ್ಲಿ ಬಂದು ಹಾಜರಾಗಿ ಸಾಕ್ಷಿ ನುಡಿದರೆ ಸತ್ಯ ಸಂಗತಿ ಹೊರಬರುತ್ತದೆ ಎಂದು ಆಕೆ ಈ ಪ್ರಕರಣದಲ್ಲಿ ಹಾಜರಾಗದೇ ನೀವು ಈ ಪ್ರಕರಣದಲ್ಲಿ ಹಾಜರಾಗಿದ್ದೀರಿ ಎಂದರೆ ಸರಿಯಲ್ಲ.

2. ಸಾಕ್ಷಿಗೆ ಈಗ ನಿಪಿ-2 ನ್ನು ತೋರಿಸುತ್ತಿದ್ದು, ಅದರ ಮೊದಲನೇ ಪುಟದ ಮೇಲೆ ವಾದಿಯ ಅಥವಾ ಪ್ರತಿವಾದಿಯ ಸಹಿ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ-2 ರ 2 ನೇ ಪುಟವನ್ನು ತೋರಿಸುತ್ತಿದ್ದು ಅದರ ವಕ್ಕಣೆ ಮಧ್ಯದಲ್ಲಿ ಪ್ರಾರಂಭವಾಗಿದೆ ಎಂದರೆ ಸರಿ. ನಿಪಿ-2 ರ 2 ನೇ ಪುಟದ ಮೇಲೆ ಡೆಪ್ಯೂಟಿ ಕಮಿಷನರ ಸ್ಟ್ಯಾಂಪರವರು ನೀಡಿದ ಹಿಂಬರಹವನ್ನು ಯಾರು ಅಂಟಿಸಿದರು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಯಾವ ಉದ್ದೇಶಕ್ಕಾಗಿ ಅದನ್ನು ಅಂಟಿಸಲಾಯಿತು ಎಂದು ಹೇಳಬಹುದಾ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ತಾವು ಈ ಪ್ರಕರಣದಲ್ಲಿ ಸಾಕ್ಷ್ಯ ನುಡಿಯುವ ಪೂರ್ವದಲ್ಲಿ ದಾವೆ ದಾಖಲು ಮಾಡುವಾಗ ಒಟಮೊಕ್ತಿಯಾರದಾರರಾಗಿ ಯಾರು ಇದ್ದರು ಎಂದರೆ ಸಾಕ್ಷಿಯು ನನ್ನ ಸಹೋದರ ಜಾವೀದ ಮಹ್ಮದಸಾಹೇಬ ಭಾಗವಾನ ಎಂದು ಸಾಕ್ಷಿ ಹೇಳುತ್ತಾರೆ. ದಾವೆಯನ್ನು ನಿಮ್ಮ ಸಹೋದರನೆ ದಾಖಲಿಸಿದ್ದಾನೆ ಎಂದರೆ ಸರಿ. ನಿಪಿ-2 ದಾಖಲಾತಿಗೆ ನಿಮ್ಮದಾಗಲೀ ಅಥವಾ ನಿಮ್ಮ ಸಹೋದರನದ್ದಾಗಲೀ ಸಹಿ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಪಿ-2 ದಾಖಲಾತಿ ಕೇವಲ ವಾದಿ ಮತ್ತು ಪ್ರತಿವಾದಿ ನಡುವೆ ಮಾತ್ರ ಆಗಿದೆ ಎಂದರೆ ಹಿರಿಯರ ಸಮ್ಮುಖದಲ್ಲಿ ಎಂದು ಸಾಕ್ಷಿ ಹೇಳುತ್ತಾರೆ. ನೀವಾಗಲೀ, ನಿಮ್ಮ ಸಹೋದರನಾಗಲೀ ಸದರಿ ಮಾತುಕತೆಯಲ್ಲಿ ಮಧ್ಯಸ್ಥಿಕೆಗಾರರಾಗಿಲ್ಲ ಎಂದರೆ ಮಧ್ಯಸ್ಥಿಕೆಗಾರರಾಗಿದ್ದೇವೆ ಆದರೆ ಸಹಿ ಮಾಡಿಲ್ಲ ಎಂದು ಹೇಳುತ್ತಾರೆ. ನಿಪಿ-2 ರ 2 ನೇ ಪುಟದಲ್ಲಿ ಸಾಕ್ಷಿದಾರರು ಕ್ರಮ ಸಂಖ್ಯೆ 4 ಮತ್ತು 6 ಖಾಲಿ ಬಿಡಲಾಗಿದೆ ಎಂದರೆ ಸರಿ. 4 ಜನ ಸಾಕ್ಷಿದಾರರು ಮಹಾಲಿಂಪೂರದವರಲ್ಲ ಎಂದರೆ ಒಬ್ಬರು ಮಹಾಲಿಂಪೂರದವರು ಎಂದು ಹೇಳುತ್ತಾರೆ. ಉಸ್ಮಾನ ಪೆಂಡಾರಿ 5 ನೇ ಸಾಕ್ಷಿದಾರ ಮಹಾಲಿಂಪೂರದವರು ಎಂದು ಸಾಕ್ಷಿ ಹೇಳುತ್ತಾರೆ.

3. ವಾದ ಪತ್ರದಲ್ಲಿ ಯಾರು ಯಾರು ಮಧ್ಯಸ್ಥಿಕೆಗಾರರು ಇದ್ದು ಎಂದು ನಮೂದಿಸಿಲ್ಲ ಎಂದರೆ ಸರಿ. ಅದೇ ರೀತಿ ಭಾಗವಾನ ಕುಟುಂಬದ ಸಹೋದರರು ಹಾಜರ ಇದ್ದರು ಎಂದು ಸಹ ಮತ್ತು ವ್ಯವಹಾರದಲ್ಲಿ ಭಾಗವಹಿಸಿದರು ಎಂದು ನಮೂದು ಇಲ್ಲ ಎಂದರೆ ಸರಿ. ದಾವಾ ಆಸ್ತಿ ಒಂದೇ ಸರ್ವೆ ನಂಬರನ 20 ಏಕರೆ ಆಸ್ತಿ ಇದ್ದು, ಅದಕ್ಕೆ ಕೇವಲ ಪ್ರತಿವಾದಿ ಒಬ್ಬರೇ ಮಾಲೀಕರು ಎಂದರೆ ಸರಿ. ಆ ರೀತಿ ಒಂದೇ ಆಸ್ತಿ ಇದ್ದು ಒಬ್ಬರೇ ಮಾಲೀಕರು ಇದ್ದ ಕಾರಣ ನಿಮ್ಮ ಪ್ರಕಾರ ಎಲ್ಲಾ ಮೊತ್ತವನ್ನು ನೀಡಿದ್ದರೆ ನೇರವಾಗಿ ಕ್ರಯದಸ್ತು ಮಾಡಿಕೊಳ್ಳಲು ಏನಾದರೂ ತೊಂದರೆ ಇತ್ತಾ ಎಂದರೆ ಅಳತೆ ಮಾಡಿ ಕೊಡವುದು ಬಾಕಿ ಇತ್ತು ಎಂದು ಹೇಳುತ್ತಾರೆ. ಕ್ರಯದಸ್ತಿನಲ್ಲಿ 2 ನೇ ಪುಟದಲ್ಲಿ ನಿಮ್ಮ ಖರ್ಚಿನಿಂದ

ನಿಮ್ಮ ಹೆಸರಿಗೆ ನೀವು ಹೇಳಿದವರ ಹೆಸರಿಗೆ ಕ್ರಯದಸ್ತು ಬರೆದುಕೊಡುತ್ತಾರೆ ಎಂದು ನಮೂದಿಸಲಾಗಿದೆ ಎಂದರೆ ಸರಿ. ಆದ್ದರಿಂದ ಸದರಿ ದಾಖಲಾತಿ ನಿಶ್ಚಿತ ದಾಖಲಾತಿ ಇರುವುದಿಲ್ಲ, ಅದು “uncertain contract” ಆಗಿರುತ್ತದೆ ಎಂದರೆ ಸರಿಯಲ್ಲ.

4. ನಿಮ್ಮ ಪ್ರಕಾರ ಕರಾರು ಆದ 12 ವರ್ಷಗಳ ನಂತರ ಮುದ್ರಾಂಕ ಶುಲ್ಕ ಪಾವತಿಸುವ ಪೂರ್ವದಲ್ಲಿ ನೀವು ಪ್ರತಿವಾದಿಗೆ ಯಾವುದಾದರೂ ನೋಟಿಸ್ ನೀಡಿದಿರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಡೆಪ್ಯೂಟಿ ಕಮಿಷರ್ ಆಫ್ ಸ್ಟಾಂಪ್ ಇವರು ನೋಟಿಸ್ ನೀಡಿದ್ದಾರೆಯೇ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಕೇವಲ ವಾದಿಯ ಛಾಯಾಚಿತ್ರದ ಮೇಲೆ ಸಹಿ ಇದ್ದು, ಪ್ರತಿವಾದಿಯ ಛಾಯಾಚಿತ್ರದ ಮೇಲೆ ಸಹಿ ಇಲ್ಲ ಎಂದರೆ ಸರಿ. ಸಾಕ್ಷಿಗೆ ಈಗ ನಿಪಿ-2 ರ ಮೇಲಿನ ಪ್ರತಿವಾದಿಯ ಛಾಯಾಚಿತ್ರವನ್ನು ತೋರಿಸುತ್ತಿದ್ದು ಅದರಲ್ಲಿನ ಪ್ರತಿವಾದಿಯ ಛಾಯಾಚಿತ್ರ 2010 ರಲ್ಲಿದ್ದಲ್ಲ, ಅದಕ್ಕಿಂತ ಬಹಳ ಪೂರ್ವದಲ್ಲಿಯದ್ದು ಎಂದರೆ ಯಾವಾಗಿನ ಛಾಯಾಚಿತ್ರ ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಮ್ಮ ಪ್ರಕಾರ 50 ಲಕ್ಷ ರೂಪಾಯಿ ನೀಡಿದ ಬಗ್ಗೆ ಪ್ರತಿವಾದಿ ಕಡೆಯಿಂದ ನೀವು ಪಾವತಿ ಪಡೆದಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

5. ವಾದಿ 2010 ರಲ್ಲಿ ಏನು ಉದ್ಯೋಗ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿ ಸರಕಾರಿ ನೌಕರಸ್ಥಳಲ್ಲ. ಯಾವುದಾದರೂ ಕಾಂಟ್ರ್ಯಾಕ್ಟ ಕೆಲಸ ಮಾಡುತ್ತಿದ್ದರಾ ಎಂದರೆ ಇಲ್ಲ, ಆದರೆ ವ್ಯಾಪಾರ ಮಾಡುತ್ತಿದ್ದರು, ಆದರೆ ಯಾವ ವ್ಯಾಪಾರ ಗೊತ್ತಿಲ್ಲ ಎಂದು ಹೇಳುತ್ತಾರೆ. ವಾದಿಯ ಮನೆತನದ ಉದ್ಯೋಗ ಏನಿತ್ತು ಎಂದರೆ ಬಿದರಿನ ವ್ಯಾಪಾರ ಎಂದು ಹೇಳುತ್ತಾರೆ. ಸದರಿ ವ್ಯಾಪಾರದಲ್ಲಿ ಎಷ್ಟು ಅದಾಯ ಬರುತಿತ್ತು ಮತ್ತು ಆದಾಯ ತೆರಿಗೆ ಪಾವತಿ ಮಾಡುತ್ತಿದ್ದರಾ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿ ಮತ್ತು ಆಕೆಯ ಗಂಡನ ಕುಟುಂಬದವರ ನಡುವೆ ಸಂಬಂಧ ಸರಿ ಇತ್ತೋ ಇಲ್ಲವೋ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯ ಗಂಡ ಎಷ್ಟು ವರ್ಷದ ಹಿಂದೆ ತೀರಿಕೊಂಡಿದ್ದ ಎಂದರೆ 2004-05 ರಲ್ಲಿ ತೀರಿಕೊಂಡಿದ್ದ, ಆದರೆ ನಿರ್ದಿಷ್ಟ ದಿನಾಂಕ ನನಗೆ ಗೊತ್ತಿಲ್ಲ.

6. ನಿಮಗೆ ಲಕ್ಷ್ಮಣ ಯಲಪ್ಪ ಬುರುಡ ಅವರ ಪರಿಚಯ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಲಕ್ಷ್ಮಣ ಈತ ವಾದಿಯ ಗಂಡನ ತಂದೆ ಎಂದರೆ ನನಗೆ ಗೊತ್ತಿಲ್ಲ. 2006 ರಲ್ಲಿ ವಾದಿ ಮತ್ತು ಆಕೆಯ ಗಂಡನ ಕುಟುಂಬದ ಸದಸ್ಯರ ನಡುವೆ ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ವಾದಿ ತನ್ನ ಮಾವನ ವಿರುದ್ದ ಅಸಲು ದಾವಾ ಸಂಖ್ಯೆ 308/2006 ರಂತೆ ವಿಭಾಗ ಕೋರಿ

ಮಾನ್ಯ ಪ್ರಧಾನ ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಜಮಖಂಡಿ ಇವರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ತದನಂತರ ಸದರಿ ದಾವೆ ಮುಧೋಳ ಹಿರಿಯ ಸಿವ್ಹಿಲ್ ನ್ಯಾಯಾಲಯದಲ್ಲಿ ಅದೇ ವರ್ಷ ದಾಖಲಾಯಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಾದಿ ಜೀವನಾಂಶ ಕೋರಿ ತನಗೆ ದಿನಿನಿತ್ಯದ ಅವಶ್ಯಗಳಿಗೆ ಹಣ ಇಲ್ಲ ಎಂದು ಹೇಳಿ ದಾವೆ ಸಲ್ಲಿಸಿದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ವಾದಿ ತಿಂಗಳಿಗೆ 6 ಸಾವಿರ ರೂಪಾಯಿ ಜೀವನಾಂಶ ನೀಡಬೇಕು ಎಂದು ಕೋರಿ ಮಧ್ಯಂತರ ಅರ್ಜಿಯನ್ನು ಸಹ ಸದರಿ ದಾವೆಯಲ್ಲಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯ ಸದರಿ ಮಧ್ಯಂತರ ಅರ್ಜಿಯ ಮೇಲೆ 3 ಸಾವಿರ ರೂಪಾಯಿ ತಿಂಗಳಿಗೆ ಜೀವನಾಂಶ ನೀಡಿ ದಿಃ13.07.2007 ರಂದು ಆದೇಶ ಮಾಡಿತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜೀವನಾಂಶ ವಸೂಲಾತಿ ಕೋರಿ ಅಮಲಜಾರಿ ಪ್ರಕರಣ ಸಂಖ್ಯೆ 1/2010 ಎಂದು ಇದೆ ನ್ಯಾಯಾಲಯದಲ್ಲಿ ವಾದಿ ಅರ್ಜಿ ಸಲ್ಲಿಸಿದಳು ಎಂದರೆ ನನಗೆ ಗೊತ್ತಿಲ್ಲ. 2010 ರಲ್ಲಿ ವಾದಿಗೆ ಯಾವುದೇ ಉತ್ಪನ್ನ ಇರಲಿಲ್ಲ ಎಂದರೆ ಉತ್ಪನ್ನ ಇತ್ತು ಎಂದು ಸಾಕ್ಷಿ ಹೇಳುತ್ತಾರೆ.

7. ನಿಮ್ಮ ಪ್ರಕಾರ ವಾದಿಗೆ 50 ಲಕ್ಷ ವಾದಿಗೆ ಎಲ್ಲಿಂದ ಬಂತು ಎಂದು ತೋರಿಸಲು ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯ ಬ್ಯಾಂಕ ಖಾತೆ ವಿವರಗಳನ್ನು ಮತ್ತು ಪಾಸ್ ಬುಕ್ ವಿವರಗಳನ್ನು ನೋಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಒವಮೊಕ್ತಿಯಾರದಾರನಾಗಿ ಸಾಕ್ಷ್ಯ ನುಡಿಯುವ ಪೂರ್ವದಲ್ಲಿ 50 ಲಕ್ಷ ರೂಪಾಯಿ ಎಲ್ಲಿಂದ ಬಂದಿತು ಎಂದು ವಾದಿಯನ್ನು ವಿಚಾರಿಸಿದ್ದೀರಾ ಎಂದರೆ ವಿಚಾರಿಸಿದ್ದೇನೆ ಎಂದು ಹೇಳುತ್ತಾರೆ. ಎಲ್ಲಿಂದ ಸದರಿ ಮೊತ್ತ ಬಂದಿತು ಎಂದು ಹೇಳಿದರು ಎಂದರೆ ತಂದೆ ಸ್ವಲ್ಪ ಹಣ ನೀಡಿದ್ದು, ಗಂಡ ಕೂಡಿಸಿಟ್ಟಿದ್ದ ಹಣ ಇತ್ತು ಎಂದು ಹೇಳಿದರು ಎಂದು ಸಾಕ್ಷಿ ನುಡಿಯುತ್ತಾರೆ. ವಾದಿಯ ತಂದೆಯ ಹೆಸರು ಏನು ಎಂದು ಕೇಳಿದಿರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯ ತಂದೆ ಏನು ಉದ್ಯೋಗ ಮಾಡುತ್ತಿದ್ದರು ಎಂದು ನೀವು ವಿಚಾರಿಸಿದಿರಾ ಎಂದರೆ ನಿವೃತ್ತ ಅಧಿಕಾರಿ ಇದ್ದು, ಯಾವ ಇಲಾಖೆಯದ್ದು ಎಂದು ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಯ ಮದುವೆಗಿಂತ ಮೊದಲೇ ಆಕೆಯ ತಂದೆ ತೀರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ಮತ್ತು ಗಂಡನಿಗೆ ಯಾವುದೇ ಉತ್ಪನ್ನ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿಯ ತಂದೆ ಆಕೆಗೆ ಹಣ ನೀಡಿದ್ದಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಆಕೆ ನನಗೆ ಆ ರೀತಿ ಹೇಳಿದಳು ಎಂದು ಸಾಕ್ಷಿ ಹೇಳುತ್ತಾರೆ.

8. ಆ ರೀತಿ ನಿಮ್ಮ ಪ್ರಕಾರ ವಾದಿ ನಿಮಗೆ ಹೇಳಿದಂತೆ ಆಕೆಯ ತಂದೆ ಹಣ ನೀಡಿದ್ದಕ್ಕೆ ಸಂಬಂಧಿಸಿದಂತೆ ಯಾವುದಾದರೂ ದಾಖಲಾತಿ ನೋಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿಗೆ 2006 ರಿಂದ ಇಲ್ಲಿಯವರೆಗೂ ಸಹ 50 ಲಕ್ಷ ರೂಪಾಯಿಯಷ್ಟು ಕೊಡುವ ಆರ್ಥಿಕ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆರ್ಥಿಕ ಸಾಮರ್ಥ್ಯ ಪುಷ್ಠಿಕರಿಸಲು ಯಾವುದೇ ದಾಖಲಾತಿ ಇಲ್ಲ ಎಂದರೆ ಸರಿ. ನಿಮ್ಮ ಪ್ರಕಾರ 2010 ರಲ್ಲಿ ಆದ ಕ್ರಯದ ಕರಾರು ಪತ್ರದ ಸಮಯದಿಂದ 2022 ರವರೆಗೆ ಪ್ರತಿವಾದಿಗೆ ಹಣ ಪಡೆದು ಕ್ರಯದಸ್ತು ಬರೆದುಕೊಡಬೇಕು ಎಂದು ಯಾವುದಾದರು ನೋಟಿಸ್ ನೀಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪ್ರತಿವಾದಿಯ ಸಹೋದರರ ನಡುವೆ ಒಂದು ದಾವೆ ಸಲ್ಲಿಸಲಾಗಿದ್ದು, ಆ ದಾವೆ ಇತ್ಯರ್ಥ್ಯಗೊಂಡ ನಂತರ ಕ್ರಯದಸ್ತು ಬರೆದುಕೊಡುತ್ತಾರೆ ಎಂದು ಹೇಳಿದ್ದರಿಂದ ನೋಟಿಸ್ ನೀಡಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ಸಂಬಂಧಿಸಿದಂತೆ ಸದರಿ ನಿಮ್ಮ ಪ್ರಕಾರ ಸಲ್ಲಿಸಿದ ದಾವೆ ಚಾಲ್ತಿಯಲ್ಲಿ ಇತ್ತಾ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಯಾವ ದಾವೆ ಯಾವ ಕಾರಣಕ್ಕಾಗಿ ಸಲ್ಲಿಸಲಾಗಿತ್ತು ಎಂದು ದಾಖಲಾತಿಗಳನ್ನು ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ನುಡಿದು, ಅವರು ಹೇಳಿದರ ವಿಶ್ವಾಸದ ಮೇಲೆ ನಾವು ನೋಟಿಸ್ ನೀಡಲಿಲ್ಲ ಎಂದು ಹೇಳುತ್ತಾರೆ.

9. ಪ್ರತಿವಾದಿ ದಾವಾ ಆಸ್ತಿ 20 ಏಕರೆಯ ಜಮೀನಿನ ಮಾಲೀಕ ಇದ್ದಾನೆ ಎಂದರೆ ಸರಿ. ಪ್ರತಿವಾದಿ ವೈದ್ಯಕೀಯ ವೃತ್ತಿ ಮಾಡುತ್ತಿದ್ದ ಎಂದರೆ ಆತ ವೈದ್ಯನೆಂದು ಗೊತ್ತಿದ್ದು, ಅದರೆ ವೃತ್ತಿ ಮಾಡುತ್ತಿದ್ದ ಅಥವಾ ಇಲ್ಲವೋ ಎಂದು ಗೊತ್ತಿಲ್ಲ ಎಂದು ಹೇಳುತ್ತಾರೆ. ದಾವಾ ಆಸ್ತಿ ನೀರಾವರಿ ಆಸ್ತಿ ಎಂದರೆ ನಮಗೆ ನೀಡುವಾಗ ಇರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಬೆಳಗಲಿ ಗ್ರಾಮದಲ್ಲಿ ಪ್ರತಿವಾದಿ ಹೆಂಡತಿ ಮತ್ತು ಮಕ್ಕಳ ಹೆಸರಿನಲ್ಲಿ 18 ಏಕರೆ ಬೇರೆ ಆಸ್ತಿ ಇದೆ ಎಂದರೆ ಸರಿ. ಪ್ರತಿವಾದಿಗೆ ದಾವಾ ಆಸ್ತಿ ಮಾರಾಟ ಮಾಡುವ ಯಾವುದೇ ಆರ್ಥಿಕ ಅವಶ್ಯಕತೆ ಇರಲಿಲ್ಲ ಎಂದರೆ ಅವಶ್ಯಕತೆ ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ಅರ್ಥಿಕ ಅವಶ್ಯಕತೆ ಏನು ಇತ್ತು ಎಂದು ನಿಪಿ-2 ರಲ್ಲಿ ನಮೂದು ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಏನು ಆರ್ಥಿಕ ಅವಶ್ಯಕತೆ ನಿಮ್ಮ ಪ್ರಕಾರ ಇತ್ತು ಎಂದು ನಿಮಗೆ ಗೊತ್ತಿದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

10. ನಿಪಿ-2 ರ ಕರಾರು ಪತ್ರದಲ್ಲಿ ದಿಃ25.06.2013 ರವರೆಗೆ ಕ್ರಯದಸ್ತು ಬರೆದುಕೊಡಬೇಕು ಎಂದು ನಮೂದು ಆಗಿದೆ ಎಂದರೆ ಸರಿ. ತದನಂತರ ಯಾವುದೇ ಪುರವಣಿ ಕರಾರು ಪತ್ರ ಆಗಿಲ್ಲ ಎಂದರೆ ಸರಿ. ಈ ದಾವೆ 2023 ರಲ್ಲಿ ಸಲ್ಲಿಸಿದ್ದು, ದಾವೆ ಕಾಲಪರಿಮಿತ ಅಧಿನಿಯಮದ ಬಾಹಿರವಾಗಿದೆ

ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದ 2016 ರಲ್ಲಿ ನಾವು ಕಬ್ಜೆ ತೆಗೆದುಕೊಂಡಿದ್ದು ಕ್ರಯದಸ್ತು ಬರೆದುಕೊಡುತ್ತೇವೆ ಎಂದು ಹೇಳಿದ್ದರು ಸಹ ಬರೆದುಕೊಟ್ಟಿಲ್ಲ ಎಂದು ಹೇಳುತ್ತಾರೆ. 2016 ರಲ್ಲಿ ನಿಮ್ಮ ಪ್ರಕಾರ ಸ್ವಾಧೀನ ನೀಡಿದ್ದಾರೆ ಎಂದು ಪ್ರತಿವಾದಿಗೆ ನೀಡಿದ ನೋಟಿಸ್ ವಾದ ಪತ್ರ, ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಅಥವಾ ಯಾವುದೇ ದಾಖಲಾತಿ ಎಲ್ಲಿಯು ನಮೂದು ಇಲ್ಲ ಎಂದರೆ ಸರಿ. ನಿಪಿ-2 ಕರಾರು ಪತ್ರ ಇದು ನೋಂದಣಿ ಆಗದ ದಾಖಲಾತಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ವಿಶ್ವಾಸದ ಮೇಲೆ ನೋಂದಣಿ ಮಾಡಿಸಿಲ್ಲ ಎಂದು ಹೇಳುತ್ತಾರೆ. ನೀವು ನಿಮ್ಮ ಪ್ರಕಾರ ಪ್ರತಿವಾದಿಗೆ ಕಳುಹಿಸಿದ ನೋಟಿಸ್ ಆತನಿಂದ ಸ್ವೀಕೃತಿ ಆಗಿಲ್ಲ ಎಂದರೆ ಪ್ರತಿವಾದಿ ಸದರಿ ನೋಟಿಸ್ ತೆಗೆದುಕೊಂಡಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ-6 ಲಕೋಟೆಯನ್ನು ತೋರಿಸುತ್ತಿದ್ದು, ಅದರ ಮೇಲೆ ಅನಕ್ಲೇಮ ಎಂದು ಬರೆದಿದ್ದು ಅದರ ಮೇಲೆ ಪೋಸ್ಟ ಮೆನ್ ಸಹಿ ಇಲ್ಲ ಎಂದರೆ ನನಗೆ ಅದು ಅಷ್ಟು ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

11. ವಾದಿ ಈಗಲೂ ಸಹ ಯಾವುದೇ ಉದ್ಯೋಗ ಮಾಡುತ್ತಿಲ್ಲ ಎಂದರೆ ಮಹಿಳಾ ಕೈಗಾರಿಕಾ ಉದ್ಯೋಗ ಮಾಡುತ್ತಾಳೆ ಎಂದು ಸಾಕ್ಷಿ ಹೇಳುತ್ತಾರೆ. ಅದಕ್ಕೆ ಸರಕಾರದ ಸಹಾಯ ಮೊತ್ತ ಪಡೆದಿದ್ದಾರಾ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆಕೆಯ ಬಳಿ ಎಷ್ಟು ಕೆಲಸಗಾರರು ಇದ್ದಾರೆ ಎಂದು ಗೊತ್ತಿದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಯಾವ ಅಂಗಡಿಯಲ್ಲಿ ವ್ಯಾಪಾರ ಮಾಡುತ್ತಾರೆ ಮತ್ತು ಅದಕ್ಕೆ ಲೆಸೆನ್ಸ ಇದೆಯಾ ಎಂದರೆ ಮನೆಯಲ್ಲಿ ವ್ಯಾಪಾರ ಮಾಡುತ್ತಿದ್ದು, ಆಕೆ ಲೈಸೆನ್ಸ ಹೊಂದಿರಬಹುದು ಎಂದು ಸಾಕ್ಷಿ ಹೇಳುತ್ತಾರೆ. ವ್ಯಾಪಾರಕ್ಕೆ ಸಂಬಂಧಿಸಿದಂತೆ ತೆರಿಗೆ ಪಾವತಿಸುತ್ತಾರಾ ಎಂದರೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ವಾದಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಾರೋ ಅಥವಾ ಸ್ವಂತ ಮನೆಯಲ್ಲಿ ವಾಸಿಸುತ್ತಾರೋ ಎಂದರೆ ಸ್ವಂತ ಮನೆಯಲ್ಲಿ ಎಂದು ಹೇಳುತ್ತಾರೆ. ಆಕೆ ಸ್ವಂತ ಮನೆಯಲ್ಲಿ ವಾಸಿಸುತ್ತಾಳೆ ಎಂದು ತೋರಿಸಲು ದಾಖಲಾತಿ ಹಾಜರಪಡಿಸುತ್ತೀರಾ ಎಂದರೆ ಹಾಜರಪಡಿಸುತ್ತೇನೆ ಎಂದು ಹೇಳುತ್ತಾರೆ. ವಾದಿಯ ಮನೆಯನ್ನು ನಾನು ನೋಡಿದ್ದೇನೆ. ವಾದಿಯ ಮನೆಯಿಂದ ಯಾವುದೇ ಉತ್ಪನ್ನ ಬರುವುದಿಲ್ಲ, ವಾದಿಯು ಅಲ್ಲಿಯೇ ವ್ಯಾಪಾರ ಮಾಡುತ್ತಿದ್ದು, ನಾನು ಸಹ ಅಲ್ಲಿಯೇ ಖರೀದಿಸಿದ್ದೇನೆ ಎಂದು ಹೇಳುತ್ತಾರೆ. ಅದಕ್ಕೆ ಸಂಬಂಧಿಸಿದತರೆ ರಸೀದಿ ಇವೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

12. ನಾನು ಪದವೀದರನಾಗಿದ್ದೇನೆ. ವಾದ ಪತ್ರದ 5 ನೇ ಪುಟದಲ್ಲಿ ಪ್ರತಿವಾದಿ ನಿಮಗೆ ಲಾವಣಿ ಕರಾರು ಪತ್ರವನ್ನು ದಿಃ16.05.2016 ರಂದು ಬರೆದುಕೊಟ್ಟಿದ್ದಾನೆ ಎಂದು ನಮೂದಿಸಿದ್ದೀರಿ ಎಂದರೆ ಸರಿ. ಸಾಕ್ಷಿಗೆ ಈಗ ಅವರು ಹಾಜರಪಡಿಸಿದ ದಾಖಲಾತಿ ತೋರಿಸುತ್ತಿದ್ದು, ನೀವು ಲಾವಣಿ ಕರಾರು ಪತ್ರ ಹಾಜರಪಡಿಸಿಲ್ಲ ಎಂದರೆ ಸರಿ. ಭೂ ಸುಧಾರಣೆ ಕಾಯ್ದೆ ಪ್ರಕಾರ ದಿಃ01.04.1974 ರಿಂದ ರದ್ದಾಗಿದೆ ಎಂದರೆ ನನಗೆ ಗೊತ್ತಿಲ್ಲ. ಅದು ಬೇಕಾಯ್ದೆಸೇರಿ ದಾಖಲಾತಿ ಆದ ಕಾರಣ ಅದನ್ನು ಹಾಜರಪಡಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಆ ರೀತಿ ಯಾವುದೇ ಲಾವಣಿ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಗೆ ಎಷ್ಟು ಜನ ಮಕ್ಕಳು ಇದ್ದಾರೆ ಎಂದರೆ ಇಬ್ಬರು ಮಕ್ಕಳು ಎಂದು ಹೇಳುತ್ತಾರೆ. ಒಬ್ಬ ಮಗಳು ಮತ್ತು ಒಬ್ಬ ಮಗ ಇದ್ದಾನೆ ಎಂದು ಹೇಳುತ್ತಾರೆ. ಮಗ ಬುದ್ದಿಮಾಂದ್ಯನಾದ್ದಾನೆ ಎಂದು ಹೇಳುತ್ತಾರೆ. ಮಗಳ ಮದುವೆ ಆಗಿದೆ. ಮಗಳು ಎಲ್ಲಿ ವಾಸಿಸುತ್ತಾಳೆ ಎಂದು ನನಗೆ ಗೊತ್ತಿಲ್ಲ. ವೈಯಕ್ತಿಕವಾಗಿ ವಾದಿಯ ಮನೆತನದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಹೆಚ್ಚು ಕಡಿಮೆ ಎಲ್ಲಾ ಗೊತ್ತಿದೆ ಎಂದು ಹೇಳುತ್ತಾರೆ. ಕ್ರಯದ ಕರಾರು ಪತ್ರದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲ, ನಿಮ್ಮ ಮುಂದೆ ಯಾವುದೇ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. 2010 ರಲ್ಲಿ ನೀವು ವಯಸ್ಕನಾಗಿರಲಿಲ್ಲ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-2 ಕ್ರಯದ ಕರಾರು ಪತ್ರ ಇದು ಸೃಷ್ಟಿತ ದಾಖಲಾತಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ವಾದಿ ಶಿೂವತ್ತು 50 ಲಕ್ಷ ರೂಪಾಯಿ ನೀಡಿಲ್ಲ ಎಂದರೆ ಸರಿಯಲ್ಲ. ಬಾಂಡ್ ರೈಟರ, ಮುತ್ತುರಾಣಿ ನಿಮ್ಮ ಸಹೋದರ ಸೇರಿ ಖೊಟ್ಟಿ ದಾಖಲಾತಿಯನ್ನು ಸೃಷ್ಟಿಸಿ ನೀವು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ